VIII ಬ್ರಹ್ಮಾವರ ತಾಲ್ಲೂಕಿನ ನೀತಾನದಿಯ ತಡೆಗೋಡೆಗಳನ್ನು ಕಟ್ಟುವುದು.

ಶ್ರೀ ಬಸರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ ಬೆಣ್ಣೆಕುದ್ರು ಎನ್ನುವುದು ನೀತಾನದಿಯ ದಡದಲ್ಲಿದ್ದು ಕುಮಟಗೋಡು ಮತ್ತು ಹಂದಾಡಿ ಗ್ರಾಮಗಳನ್ನೊಳಗೊಂಡ ಒಂದು ದ್ವೀಪವಾಗಿದ್ದು, ಬ್ರಹ್ಮಾವರ ಟೌನ್ ಪಂಚಾಯತಿಗೆ ಸೇರಿದ್ದಾಗಿರುತ್ತದೆ. ಈ ಪ್ರದೇಶದಲ್ಲಿರುವ ೮ ಚದರ ಕಿಲೋ ಮೀಟರ್ ವಿಸ್ತೀರ್ಣವನ್ನು ಹೊಂದಿದ್ದು ಸುಮಾರು ೨ ಸಾವಿರಕ್ಕೂ ಹೆಚ್ಚು ಜನರು ವಾಸವಾಗಿದ್ದು, ಹೆಚ್ಚಿನವರು ಜೀವನೋಪಾಯಕ್ಕಾಗಿ ಬೇಸಾಯ ಮತ್ತು ಮೀನುಗಾರಿಕೆಯನ್ನು ಅವಲಂಬಿಸಿ ಕೊಂಡಿದ್ದಾರೆ.

ಕಳೆದೆರಡು ವರುಷಗಳಿಂದ ಈ ಪ್ರದೇಶದಲ್ಲಿ ನದಿಯ ಮಹಾಪೂರದ ಪರಿಣಾಮವಾಗಿ ದಡದ ಕೊರೆತ ಪ್ರಾರಂಭವಾಗಿ ಫಲವತ್ತಾದ ಕಬ್ಬು, ಭತ್ತ, ಬೆಳೆಯಾಗುವ ಭೂ ಭಾಗಗಳು ತೆಂಗಿನ ತೋಟಗಳು, ನೀರು ಪಾಲಾಗಿವೆ. ಎದುರುಗಡೆ ದಡಕ್ಕೆ ತಡೆಗೋಡೆ ಕಟ್ಟಿರುವುದರಿಂದ ಈ ಭಾಗದ ನೀರಿನ ಬಡಿತ ಮತ್ತು ಕೊರೆತಗಳು ಇನ್ನೂ ಹೆಚ್ಚಾಗಿವೆ. ಹಾಗಾಗಿ ಇಲ್ಲಿ ತಡೆಗೋಡೆಯನ್ನು ನಿರ್ಮಿಸದಿದ್ದರೆ ಇತೀ ದ್ವೀಪವೇ ಕೊಚ್ಚಿಹೋಗುವ ಭಯವಿರುವುದರಿಂದ ಸುಮಾರು ೧.೫ ಕಿಲೋಮೀಟರ್ ಉದ್ದದ ಒಂದು ತಡೆಗೋಡೆಯನ್ನು ಕೂಡಲೇ ಕಟ್ಟಿಸುವಂತೆ ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.—ಇನ್ನೂ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರ ನನ್ನ ಕೈಗೆ ಬಂದಿಲ್ಲ. ಉತ್ತರವನ್ನು ತರಿಸಿ ಅವರಿಗೆ ತಿಳಿಸುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ಪದೇ ಪದೇ ಈ ಸದನದಲ್ಲಿ ಮಾನ್ಯ ಸಚಿವರು ಉತ್ತರ ಕೊಡತಕ್ಕಂಥದ್ದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು ತಮಗೆ ತೊಂದರೆ ಕೊಡಬೇಕೆಂದು ಆಶಯವಿರುವುದಿಲ್ಲ. ಮಾನ್ಯ ಸಚಿವರು ಅರ್ಜಿಯನ್ನು ಕೊಟ್ಟರೆ ಉತ್ತರವನ್ನು ಫೋಸ್ಟ್ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಇನ್ನು ಮುಂದೆ ಸಚಿವರು ಸದನದಲ್ಲಿಯೇ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಹೇಳುತ್ತೇನೆ. ಉತ್ತರ ಬೇಕಾದರೆ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಕೆಲಸ ಆಗಬೇಕೆಂದು ಹೇಳಿದರೆ ಆ ಕೆಲಸವನ್ನು ಮಾಡಲಿಕ್ಕೂ ತಯಾರಾಗಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಉತ್ತರವನ್ನು ಈ ಸದನದಲ್ಲಿಯೇ ಕೊಡಬೇಕು. ಉತ್ತರವನ್ನು ತರಿಸಿಕೊಡುತ್ತೇವೆಂದು ಸುಮ್ಮ ಸುಮ್ಮನೇ ಕಾಲವನ್ನು ವ್ಯಯ ಮಾಡುವುದು ಬೇಡ. ಯಾವುದೇ ವಿಷಯವನ್ನು ಎತ್ತಿದರೂ ಕೂಡ ಈ ಸದನದಲ್ಲಿ ಉತ್ತರವನ್ನು ಕೊಡಬೇಕು. The moment a matter comes up here that becomes the property of the House. If the Hon'ble Minister gives an assurance that will go to the Asaurance Committee. That is the main point here. ತಾವು ಕೊಟ್ಟ ಭರವಸೆ ಅಷ್ಯೂರೆನ್ಸ್ ಕಮಿಟಿಗೆ ಹೋಗುತ್ತದೆ ಮಾನ್ಯ ಬೈರೇಗೌಡರಿಗೆ ಗೊತ್ತಾಗುತ್ತಾ ಇಲ್ಲ.

೧೧-೦೦ ಎ. ಎಂ.

VIII ಕುಂದಾಪುರ ತಾಲ್ಲೂಕಿನ ಕರ್ಕುಂಜೆಕೆಂಪುಕಲ್ಲು ಕಪ್ಪು ವ್ಯವಹಾರ

ಶ್ರೀ ವಸಂತ ಬಂಗೇರ (ಬೆಳ್ತಂಗಡಿ).—

ಮಾನ್ಯ ಅಧ್ಯಕ್ಷರೆ, ಮುಂಗಾರು ದಿನಪತ್ರಿಕೆಯ ಆಗಸ್ಟ್ ೯, ೧೯೮೫ ಮತ್ತು ೧೦ ರ ಸಂಚಿಕೆಯಲ್ಲಿ ಪ್ರಕಟವಾದ "ಕುಂದಾಪುರ ತಾಲ್ಲೂಕಿನ ಕರ್ಕುಂಜೆ ಕೆಂಪುಕಲ್ಲು, ಕಪ್ಪು ವ್ಯವಹಾರ, ಸರಕಾರಿ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ಖೋತ ಎಂಬ ವಿಷಯದಲ್ಲಿ ಗಂಗಾ ಪ್ರಸಾದ್ ಸಹಕಾರಿ ಸಂಘಕ್ಕೂ ಈ ಹಗರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂಬ ವಿಚಾರವನ್ನು ತಿಳಿಯಪಡಿಸುತ್ತೇನೆ. ಗಂಗಾಪ್ರಸಾದ್ ಸಹಕಾರಿ ಸಂಘದವರು ಕರ್ಕುಂಜೆ ಗ್ರಾಮದ ಕೆಂಪು ಕಲ್ಲು ಕ್ವರಿಯನ್ನು ತಮ್ಮ ಸಹಕಾರಿ ಸಂಘಕ್ಕೆ ಲೀಜಿಗೆ ಕೊಡುವ ಬಗ್ಗೆ ನೋ ಅಬ್ಜೆಕ್ಷನ್ ಸರ್ಟಿಫಿಕೆಟ್‌ಗಾಗಿ ಕರ್ಕುಂಜೆ ಗ್ರಾಮ ಪಂಚಾಯಿತಿಗೆ